ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 44॥ UDP/1263/2018-20 || R.NO.50495/91 ॥ ತಾರೀಕು : 18–12–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಎನ್.ರಾಘವೇಂದ್ರ ರಾವ್. ಬಿ.ಮಂಜುನಾಥ ರಾವ್ ಅರಸೀಕೆರೆ, ಬಿ.ಅನಂತಯ್ಯರಿಗೆ "ಆತಿಥ್ಯರತ್ನ" ಪ್ರಶಸ್ತಿ

ಉಡುಪಿ ಪುರಭವನದಲ್ಲಿ ನಡೆದ ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘ (ಕೆ.ಪಿ.ಎಚ್.ಆರ್.ಎ.) ದ ರಾಜ್ಯಮಟ್ಟದ ಸಮಾರಂಭದಲ್ಲಿ ಕೋಟೇಶ್ವರದ ಮಾಗಣೆಯುವರಾಗಿದ್ದು, ಖ್ಯಾತ ಹೋಟೇಲ್ ಉದ್ಯಮಿಗಳಾದ ಬಿ.ಮಂಜುನಾಥ ರಾವ್ ಅರಸೀಕೆರೆ, ಬಿ.ಅನಂತಯ್ಯ ತುಮಕೂರು, ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎನ್.ರಾಘವೇಂದ್ರ ರಾವ್ ಅವರಿಗೆ ಆತಿಥ್ಯ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ನಾಟಕ ಬ್ಯಾಂಕ್ ಆಡಳಿತ ನಿರ್ದೇಶಕ ಎಂ.ಎಸ್.ಮಹಾಬಲೇಶ್ವರ ಭಟ್, ಮಣಿಪಾಲ ಮಾಹೆ ಉಪಕುಲಾಧಿಪತಿ ಡಾ।ಎಚ್.ಎಸ್. ಬಲ್ಲಾಳ್, ಮಾಜಿ ಸಚಿವರಾದ ಕೆ.ಜಯಪ್ರಕಾಶ ಹೆಗ್ಡೆ, ಪ್ರಮೋದ್ ಮಧ್ವರಾಜ್, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕೆಪಿಎಚ್‌ಆರ್‌ಎ ಅಧ್ಯಕ್ಷ, ಬೀಜಾಡಿ ಚಂದ್ರಶೇಖರ ಹೆಬ್ಬಾರ್ ಅಧ್ಯಕ್ಷತೆ ವಹಿಸಿದ್ದರು. ಗಣ್ಯರಾದ ಹರಿಕೃಷ್ಣ ಪುನರೂರು, ಆರ್.ಉಪೇಂದ್ರ ಶೆಟ್ಟಿ , ಪುರುಷೋತ್ತಮ ಶೆಟ್ಟಿ , ರವಿರಾಜ್ ಹೆಗ್ಡೆ , ಭಾಸ್ಕರ್ ಹಂದೆ, ಪಿ.ಸುರೇಶ್ ಶೆಟ್ಟಿ , ಪಿ.ಸಿ.ರಾವ್, ವಾಸುದೇವ ಅಡಿಗ ಸೇರಿದಂತೆ ರಾಜ್ಯದ ಹಲವು ಗಣ್ಯರು ಉಪಸ್ಥಿತರಿದ್ದರು. (12ನೇ ಪುಟಕ್ಕೆ)

ಬೇಕಾಗಿದ್ದಾರೆ
▸ ವಾರ್ಡನ್ಸ್ ▸ ಅಡುಗೆಯವರು
▸ ಸಹಾಯಕ ವಾರ್ಡನ್ಸ್
▸ ಅಟೆಂಡರ್ಸ್ ▸ ಕ್ಲೀನರ್ಸ್
▸ ಸಹಾಯಕ ಅಡುಗೆಯವರು
▸ ಸೆಕ್ಯುರಿಟಿ ಗಾರ್ಡ್‌ಗಳು
ಎಲ್ಲಾ ಹುದ್ದೆಗಳಿಗೆ ಅಭ್ಯರ್ಥಿಗಳು ಹೆಂಗಸರಾಗಿರಬೇಕು. ಪರವೂರಿನ ಅಭ್ಯರ್ಥಿಗಳಿಗೆ ಊಟ, ವಸತಿ ವ್ಯವಸ್ಥೆಯಿದೆ ಹಾಗೂ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿರಿ:
ಲಿಟ್ಲ್ ಶೋನ ವರ್ಲ್ಡ್ ಸ್ಕೂಲ್
ಕದ್ರಿ ಕಂಬ್ಳ ರಸ್ತೆ, ಮಂಗಳೂರು
ಫೋನ್: 0824 2986995/2217995

ಬೇಕಾಗಿದ್ದಾರೆ
▸ ಸೂಪರ್‌ವೈಸರ್ಸ್ ▸ ಅಟೆಂಡರ್ಸ್
▸ ಸಹಾಯಕ ವಾರ್ಡನ್ಸ್
▸ ಅಡುಗೆಯವರು ▸ ಕ್ಲೀನರ್ಸ್
▸ ಸಹಾಯಕ ಅಡುಗೆಯವರು
▸ ಡ್ರೈವರ್ಸ್ - ಫುಲ್ ಟೈಮ್/ ಪಾರ್ಟ್ ಟೈಮ್ (ಬೆ: 8 - 9.30/ ಮ: 12 - 1.30)
ಪರವೂರಿನ ಅಭ್ಯರ್ಥಿಗಳಿಗೆ ಊಟ, ವಸತಿ ವ್ಯವಸ್ಥೆಯಿದೆ ಹಾಗೂ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿರಿ:
ಐಬಿಎಸ್ ಇನ್ಸ್ಟಿಟ್ಯೂಟ್
3ನೇ ಮಹಡಿ, ಪಿವಿಎಸ್ ಸೆಂಟಿನರಿ ಬಿಲ್ಡಿಂಗ್
ಪಿವಿಎಸ್ ಸರ್ಕಲ್ ಹತ್ತಿರ, ಮಂಗಳೂರು
ಫೋನ್: 0824 2984995/4256995

## ಕುಂದಾಪುರಕ್ಕೆ ಗೌರವ : ವಿಧಾನ ಪರಿಷತ್ ಸಭಾಪತಿಯಾಗಿ ಕೆ.ಪ್ರತಾಪಚಂದ್ರ ಶೆಟ್ಟಿ



ಹಿರಿಯ ರಾಜಕಾರಣಿ, ಉಡುಪಿ ಜಿಲ್ಲಾ ರೈತ ಸಂಘದ ಅಧ್ಯಕ್ಷ, ಮಾಜಿ ಶಾಸಕ ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರು ವಿಧಾನ ಪರಿಷತ್‌ನ ನೂತನ ಸಭಾಪತಿಯಾಗಿ ಅಧಿಕಾರ ಸ್ವೀಕರಿಸುವ ಮೂಲಕ ಕುಂದಾಪುರಕ್ಕೆ ಗೌರವ ಲಭಿಸಿದೆ.

ಉಡುಪಿ ಜಿಲ್ಲೆಯ ರಾಜಕಾರಣಿಯೊಬ್ಬರು ಪ್ರಪ್ರಥಮವಾಗಿ ಈ ಉನ್ನತ ಹುದ್ದೆ ಅಲಂಕರಿಸುತ್ತಿದ್ದಾರೆ.

ಬ್ಯಾಂಕ್ ಸೇವೆ ತೊರೆದು ಸಾರ್ವಜನಿಕ ಸೇವೆಗೆ ಧುಮುಕಿದ ಕೆ.ಪ್ರತಾಪಚಂದ್ರ ಶೆಟ್ಟಿಯವರು ಶಾಸಕರಾಗಿ ಹಾಗೂ ವಿಧಾನ ಪರಿಷತ್ ಸದಸ್ಯರಾಗಿ ಹಲವು ದಶಕಗಳ ಅನುಭವ ಹೊಂದಿದ್ದು, ಹಿರಿತನ ಹಾಗೂ ಅನುಭವದ ಅರ್ಹತೆ ಹೊಂದಿದ್ದಾರೆ.

ಎಸ್.ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೂ ಪ್ರತಾಪಚಂದ್ರ ಶೆಟ್ಟಿಯವರು ಸಚಿವರಾಗುತ್ತಾರೆ ಎಂಬ ಸುದ್ದಿ ಕೇಳಿ ಬರುತ್ತಲೇ ಇತ್ತಾದರೂ, ಆ ಸ್ಥಾನ ಲಭ್ಯವಾಗಲಿಲ್ಲ. ಕುಂದಾಪುರ, ಬೈಂದೂರು ಕ್ಷೇತ್ರದಿಂದ ಯಾರೂ ಸಂಪುಟ ಸೇರಲಿಲ್ಲ.

ಬ್ರಹ್ಮಾವರ ಕ್ಷೇತ್ರದಿಂದ ಶಾಸಕರಾಗಿದ್ದ ಕೆ.ಜಯಪ್ರಕಾಶ ಹೆಗ್ಡೆ ಸಚಿವರಾಗಿ ಸೇವೆ ಸಲ್ಲಿಸುವ ಅವಕಾಶ ಗಳಿಸಿದ್ದರು. ಕೋಟ ಪರಿಸರ ಕುಂದಾಪುರ ಕ್ಷೇತ್ರಕ್ಕೆ ಸೇರ್ಪಡೆಯಾದ ಮೇಲೆ ಸಚಿವ ಸ್ಥಾನ ಪಡೆದವರೆಂದರೆ ಕೋಟ ಶ್ರೀನಿವಾಸ ಪೂಜಾರಿ.

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿ ಇತ್ತೀಚಿನ ವರ್ಷಗಳಲ್ಲಿ ರೈತಪರ ಹೋರಾಟದ ಮೂಲಕ ಗಮನ ಸೆಳೆದಿದ್ದರು. ವಾರಾಹಿ ನೀರು ಕೃಷಿಕರಿಗೆ ನೀಡುವಲ್ಲಿ ವಿಳಂಬ ನೀತಿ ವಿರೋಧಿಸಿ ಪ್ರತಿಭಟನೆ, ಸತ್ಯಾಗ್ರಹ ನಡೆಸಿದ್ದರು.

ವಿಧಾನ ಪರಿಷತ್ ನಾಯಕಿಯಾಗಿ ಕರಾವಳಿಯ ಜಯಮಾಲ, ಸಭಾಪತಿಯಾಗಿ ಕೆ.ಪ್ರತಾಪಚಂದ್ರ ಶೆಟ್ಟಿ, ವಿರೋಧ ಪಕ್ಷದ ನಾಯಕರಾಗಿ ಕೋಟ ಶ್ರೀನಿವಾಸ ಪೂಜಾರಿ ಜವಾಬ್ದಾರಿ ಪಡೆದಿರುವುದು ಜಿಲ್ಲೆಯ ವಿಶೇಷವಾಗಿದೆ.

## ಕೆ.ಪ್ರತಾಪಚಂದ್ರ ಶೆಟ್ಟರಿಗೆ ಹಲವರಿಂದ ಅಭಿನಂದನೆ

ಕುಂದಾಪುರದ ಮಾಜಿ ಶಾಸಕರು, ಹಾಲಿ ವಿಧಾನ ಪರಿಷತ್ ಸದಸ್ಯರೂ ಆದ ಹಿರಿಯ ರಾಜಕೀಯ ಧುರೀಣ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು ವಿಧಾನ ಪರಿಷತ್‌ನ ಸಭಾಪತಿಯಾಗಿ ಆಯ್ಕೆ ಮಾಡಿರುವುದು ಸಂತಸದ ವಿಷಯ. ಈ ಮೂಲಕ ಉಡುಪಿ ಜಿಲ್ಲೆಯಲ್ಲಿ ರಾಜಕೀಯ ಧುರೀಣರೊಬ್ಬರು ಪ್ರಪ್ರಥಮವಾಗಿ ಈ ಗೌರವ ಪಡೆದಿದ್ದಾರೆ. ಈ ಜವಾಬ್ದಾರಿಯಲ್ಲಿ ಅವರು ಯಶಸ್ವಿಯಾಗಲಿ ಎಂದು ಮಾಜಿ ಶಾಸಕ ಬಸ್ರೂರು ಅಪ್ಪಣ್ಣ ಹೆಗ್ಡೆ ಅಭಿನಂದಿಸಿದ್ದಾರೆ.

ಸಭಾಪತಿಯಾಗಿ ಕೆ.ಪ್ರತಾಪಚಂದ್ರ ಶೆಟ್ಟಿ ಇವರು ಅಧಿಕಾರ ಸ್ವೀಕರಿಸಿರುವುದು ಸಂತಸದ ವಿಷಯ ಎಂದು ಹಿರಿಯ ಧುರೀಣ ಮಾಣಿಗೋಪಾಲ ಸಹಿತ ಹಲವು ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.




ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
ವಸಂತ ಬೇಕರಿ
ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು

ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ ಫೋನ್ : (08254) 230503, ಮೊ : 9448171188
ನಮ್ಮಲ್ಲಿ ಬರ್ತಡೇ ಕೇಕ್, ವೆಡ್ಡಿಂಗ್ ಕೇಕ್, ಎಗ್‌ಲೆಸ್ ಕೇಕ್ ಹಾಗೂ ವಿವಿಧ ಸ್ವಾದಿಷ್ಟ ಬೇಕರಿ ತಿಂಡಿ ತಿನಿಸುಗಳನ್ನು ಸ್ಪರ್ಧಾತ್ಮಕ ದರಗಳಲ್ಲಿ ಕ್ಲಪ್ತ ಸಮಯದಲ್ಲಿ ತಯಾರಿಸಿ ಕೊಡಲಾಗುವುದು.
ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ
"ತಪ್ಪದೇ ಒಮ್ಮೆ ಭೇಟಿ ನೀಡಿರಿ"


ನ್ಯೂ ವಸಂತ ಬೇಕರಿ

ಹೂವಿನ ಮಾರುಕಟ್ಟೆ ಎದುರು , ಮುಖ್ಯರಸ್ತೆ ಕುಂದಾಪುರ
ಫೋನ್ : (08254) 235703(S) 231403 (R)